ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1248(1406)

ಸದಸ್ಯರ ಹೆಸರು ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)

ಉತ್ತರಿಸುವ ಸಚಿವರು ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿ ವಿತರಣೆ ಸಂಪೂರ್ಣವಾಗಿ ಮುಗಿದಿದೆಯೇ,ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು,

ಇಲ್ಲ

ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಆದ್ಯತೆ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದುಹಾಕುವ ಬಗ್ಗೆ ಅಥವಾ ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು ವರ್ಗ ಬದಲಾವಣೆ ಕೋರಿರುವ ಅಹವಾಲುಗಳು, ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು ವರದಿಯಾಗಿದ್ದು, ಈ ರೀತಿಯಲ್ಲಿ ಸಾರ್ವಜನಿಕರಿಂದ 64 70 ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ 15 70 ಲಕ್ಷ ವರ್ಗ ಬದಲಾವಣೆಗಾಗಿ 41 36 ಲಕ್ಷ ಹೊಸ ಪಡಿತರ ಚೀಟಿಗಾಗಿ 7 64 ಲಕ್ಷ ಇತರೆ ಅಹವಾಲುಗಳಿದ್ದು, ಸಾರ್ವಜನಿಕರಿಂದ ಸ್ವೀಕರಿಸಲಾದ ದೊಡ್ಡ ಸಂಖ್ಯೆ ಅಹವಾಲುಗಳ ವಿಲೇವಾರಿಯ ಕಾರ್ಯನಿರ್ವಹಣೆ ಪ್ರಗತಿಯಲ್ಲಿರುವುದರಿಂದ ಬಿಪಿಎಲ್ ಪಡಿತರ ಚೀಟಿ ವಿತರಣೆ ವಿಳಂಬಕ್ಕೆ ಕಾರಣವಾಗಿರುತ್ತದೆ

ಆ) ವಿತರಿಸಲಾದ ಪಡಿತರ ಚೀಟಿಗಳ ವಿವರದಲ್ಲಿ ತಪ್ಪುಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ತಪ್ಪಾಗಿರುವ ಪಡಿತರ ಚೀಟಿಗಳನ್ನು ಸರಿಪಡಿಸಲು ಫಲಾನುಭವಿಗಳೇ ಅರ್ಜಿಗೆ ಒಂದು ರೂಪಾಯಿ ಹಾಗೂ ಪಡಿತರ ಚೀಟಿ ಪಡೆಯಲು ಐದು ರೂಪಾಯಿಗಳ ಶುಲ್ಕ ನೀಡುವಂತೆ ಸರ್ಕಾರದ ಆದೇಶವಿದೆಯೇ

ಬಂದಿರುತ್ತದೆ

ಹೌದು

ಇ) ಹಾಗಿದ್ದಲ್ಲಿ, ಇಲಾಖೆಯವರು ಮಾಡಿದ ತಪ್ಪಿಗಾಗಿ ಫಲಾನುಭವಿಗಳಿಂದ ಈ ರೀತಿ ಹಣ ಸಂಗ್ರಹ ಮಾಡುವುದು ಫಲಾನುಭವಿಗಳಿಗೆ ಶಿಕ್ಷೆ ನೀಡಿದಂತಾಗುವುದಿಲ್ಲವೇ,

ಇಲ್ಲ

ಈ) ಈ ಶುಲ್ಕ ರದ್ದು ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಉದ್ಭವಿಸುವುದಿಲ್ಲ

ಇಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1249(1407)**

ಸದಸ್ಯರ ಹೆಸರು **ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಶಶಿಣಂತ ಅ ನಾಯಿಕ (ಹೋಟಗಾರಿಕೆ ಸಚಿವರು)**

ಅ) ಮಲೆನಾಡು ಬಾಗದ ಅಡಿಕೆ ತೋಟಗಳಲ್ಲಿ ಹಳದಿ ಎಲೆ ರೋಗ ವ್ಯಾಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ರೋಗ ಎಷ್ಟು ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು),

ಹೌದು, ಈ ರೋಗವು ಸುಮಾರು 13800 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ ಜಿಲ್ಲಾವಾರು, ತಾಲ್ಲೂಕುವಾರು ವಿವರ ಇಂತಿವೆ

ಜಿಲ್ಲೆ ಮತ್ತು ತಾಲ್ಲೂಕು	ಹಳದಿ ಎಲೆ ರೋಗ ವ್ಯಾಪಿಸಿರುವ ಪ್ರದೇಶ (ಎಕರೆಗಳಲ್ಲಿ)
1 ಚಿಕ್ಕಮಗಳೂರು	
ಶೃಂಗೇರಿ ತಾಲ್ಲೂಕು	3000
ಕೊಪ್ಪ ತಾಲ್ಲೂಕು	3750
ನರಸಿಂಹರಾಜಪುರ ತಾಲ್ಲೂಕು	1300
ಮೂಡಿಗೆರೆ	5390
2 ಕೊಡಗು	
ಮಡಿಕೇರಿ ತಾಲ್ಲೂಕು	360
ಒಟ್ಟು	13800